ಕರ್ನಾಟಕ ಸರ್ಕಾರ (ಸಿ.ಆರ್.ಪಿ. 67)

| ಹೇಳಿಕೆ ಹಾಳೆ<br>(ಆರ್.ಪಿ. ಸಂಖ್ಯೆ 57)<br>ನಮೂನೆ ಸಂಖ್ಯೆ 4<br>(ಸಿವಿಲ್) |
|---|

ದಿವಾಣಿ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾ.ದಂ. ಹಳಿಯಾಳ
ಇವರ ನ್ಯಾಯಾಲಯದಲ್ಲಿ.

ಸಿ.ಸಿ. ನಂ.ಃ 1523/2022

..................................................................

CW 07
PW 05

ಹೆಸರು ಃ ಜಾಕಿ ಫರ್ನಾಂಡಿಸ್
ತಂದೆಯ ಹೆಸರು ಃ ಡಿಯಾಗ್
ವಯಸ್ಸು ಃ 43 ವರ್ಷ
ಉದ್ಯೋಗ ಃ ಹೊಟೇಲ್ ವ್ಯವಹಾರ
ವಾಸಸ್ಥಳ ಃ ಹಳಿಯಾಳ ಪಟ್ಟಣ.

ದಿನಾಂಕ 07-02-2026 ರಂದು ಸತ್ಯಪ್ರತಿಜ್ಞೆ ಮೇಲೆ ಪ್ರಮಾಣವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ** ಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ :

ಚಾಸಾ 6 ರವರು ಪರಿಚಯ ಇದ್ದಾರೆ. ಉಳಿದವರು ಪರಿಚಯ ಇಲ್ಲ.

ಸಾಕ್ಷಿಗೆ ಎರಡು ಭಾವಚಿತ್ರಗಳನ್ನು ತೋರಿಸಲಾಗಿ ಅದರಲ್ಲಿ ತಾವು, ಚಾಸಾ 6, ಇಬ್ಬರು ವ್ಯಕ್ತಿಗಳು ಮತ್ತು ಪೊಲೀಸರು ಇರುತ್ತಾರೆ ಎನ್ನುತ್ತಾರೆ. ಸದರಿ ಭಾವಚಿತ್ರಗಳನ್ನು ಈಗಾಗಲೇ **ನಿಪಿ 9 ಮತ್ತು 10 ಎಂದು** ಗುರುತಿಸಲಾಗಿದೆ. ಸದರಿ ಭಾವಚಿತ್ರದಲ್ಲಿ ಒಬ್ಬ ವ್ಯಕ್ತಿ ಮೋಟಾರ ಸೈಕಲ್ ಅನ್ನು ತೋರಿಸುತ್ತಿದ್ದಾನೆ. ಯಾವ ಕಾರಣಕ್ಕೆ ಎಂದು ನನಗೆ ಗೊತ್ತಿಲ್ಲ. ಸದರಿ ಭಾವಚಿತ್ರವನ್ನು 2022 ರಲ್ಲಿ ಪೊಲೀಸ ಠಾಣೆಯಲ್ಲಿ ತೆಗೆಯಲಾಗಿದೆ ಎನ್ನುತ್ತಾರೆ.

ಸಾಕ್ಷಿಗೆ ದಿನಾಂಕ 25-07-2022 ರಂದು ನೀಡಿದ ನೊಟೀಸ ಅನ್ನು ತೋರಿಸಲಾಗಿ ಅದರಲ್ಲಿನ ತಮ್ಮ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ನೊಟೀಸ್ ಅನ್ನು ಈಗಾಗಲೇ **ನಿಪಿ 11 ಎಂದು,** ಸಾಕ್ಷಿಯ ಸಹಿಯನ್ನು **ನಿಪಿ 11 ಬಿ ಎಂದು** ಗುರುತಿಸಲಾಯಿತು.

ಸಾಕ್ಷಿಗೆ ದಿನಾಂಕ 25-07-2022 ರ ಜಪ್ತುಪಂಚನಾಮೆಯನ್ನು ತೋರಿಸಲಾಗಿ ಅದರಲ್ಲಿರುವ ತಮ್ಮ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ **ನಿಪಿ 12 ಎಂದು,** ಸಾಕ್ಷಿಯ ಸಹಿಯನ್ನು **ನಿಪಿ 12 ಬಿ ಎಂದು** ಗುರುತಿಸಲಾಯಿತು. ಸದರಿ ದಾಖಲೆಗೆ 2022 ರಲ್ಲಿ ಸಹಿ ಮಾಡಿರುತ್ತೇನೆ. ಆಗ ನನ್ನಿಂದ ಬಿಳಿ ಹಾಳೆಗೆ ಪಂಚನಾಮೆ ಎಂದು ಹೇಳಿ ಸಹಿ

ಪಡೆದಿರುತ್ತಾರೆ. ನಿಪಿ 9 ಮತ್ತು 10 ರಲ್ಲಿರುವ ಮೋಟಾರ ಸೈಕಲ್ ಅನ್ನು ತೋರಿಸುತ್ತಿರುವ ವ್ಯಕ್ತಿಗಳು ಈಗ ನ್ಯಾಯಾಲಯದ ಮುಂದೆ ಇರುತ್ತಾರೆ, ಅವರನ್ನು ಈ ದಿನ ನೋಡುತ್ತೀದ್ದೇನೆ.

(ಈ ಹಂತದಲ್ಲಿ ಸಸಅ ರವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಅಂತ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೇಳಿದ್ದರಿಂದ ಸಾಕ್ಷ್ಯ ಹಾಗೂ ಪ್ರಕರಣದ ಇತರ ಅಂಶಗಳನ್ನು ಗಮನಿಸಿ ಪಾಟೀ ಸವಾಲಿಗೆ ಅನುಮತಿ ನೀಡಲಾಯಿತು ).

**ಪಾಟೀ ಸವಾಲು : ಮಾನ್ಯ ಸಹಾಯಕ ಸರಕಾರಿ ಅಭಿಯೋಜಕರಿಂದ.**

ದಿನಾಂಕ 25-07-2022 ರಂದು ಪೊಲೀಸರು ನಿಮಗೆ ಮತ್ತು ಚಾಸಾ 6 ರವರಿಗೆ ಹಳಿಯಾಳ ಪೊಲೀಸ ಠಾಣೆಯಲ್ಲಿ ಆರೋಪಿತರು ಮೋಟಾರ ಸೈಕಲ್ ಅನ್ನು ಹಾಜರುಪಡಿಸುತ್ತಾರೆ ನೀವು ಪಂಚರಾಗಿ ಬನ್ನಿ ಎಂದು ಕರೆದು ನಿಪಿ 11 ರಂತೆ ನೊಟೀಸ ನೀಡಿರುತ್ತಾರೆ ಎಂದು ಸಾಕ್ಷಿಗೆ ಸದರಿ ದಾಖಲೆಯನ್ನು ಓದಲು ಹೇಳಿದಾಗ ಸಾಕ್ಷಿ ಓದಿ ಹೌದು ಎಂದು ನುಡಿಯುತ್ತಾರೆ. ಆ ದಿನ ನಿಮಗೆ ದುರ್ಗಪ್ಪ ಮತ್ತು ಸಮೀರ್ ವುಲ್ಲಾ ರವರನ್ನು ತೋರಿಸಿದರು, ಅವರು ಒಂದು ಮೋಟಾರ ಸೈಕಲ್ ಅನ್ನು ಪೊಲೀಸರಿಗೆ ಹಾಜರುಪಡಿಸಿದರು, ಆಗ ಅದನ್ನು ಪೊಲೀಸರು ನಿಮ್ಮ ಸಮಕ್ಷಮ ಜಪ್ತುಪಡಿಸಿಕೊಂಡರು ಎಂದರೆ ಸರಿಯಲ್ಲ. ಆ ದಿನ ಆರೋಪಿತರು ಜುಬೇರ್ ಪಠಾಣ್ ಈತನು ತಮ್ಮ ಮನೆಯ ಹತ್ತಿರ ನಿಲ್ಲಿಸಿದ ಹಿರೋ ಹೊಂಡಾ ಬೈಕ್ ಕದ್ದು ನಂಬರ ಪ್ಲೇಟ್ ಬದಲಿಸಿ ನಮಗೆ ಮಾರಾಟ ಮಾಡಲು ಕೊಟ್ಟಿದ್ದನು ಎಂದು ಹೇಳಿದರು. ಸದರಿ ವಾಹನ ಸಂಖ್ಯೆ ಕೆಎ-31/7320 ಆಗಿತ್ತು ಎಂದರೆ ಸರಿಯಲ್ಲ. ಆ ದಿನ ಪಂಚನಾಮೆಯನ್ನು ಬೆಳಗ್ಗೆ 10-00 ರಿಂದ 11-00 ಗಂಟೆಯ ವರೆಗೆ ನಿಮ್ಮ ಸಮಕ್ಷಮ ಜರುಗಿಸಿ ಓದಿ ಹೇಳಿ ನಿಮ್ಮ ಸಹಿ ಪಡೆದಿರುತ್ತಾರೆ ಎಂದರೆ ಸರಿಯಲ್ಲ, ಪೊಲೀಸರು ನಮ್ಮಿಂದ ಬಿಳಿ ಹಾಳೆಗೆ ಸಹಿ ಪಡೆದಿರುತ್ತಾರೆ. ಆ ನಂತರ ಟೈಪ್ ಮಾಡಿರುತ್ತಾರೆ ಎನ್ನುತ್ತಾರೆ. ನಿಪಿ 9 ಮತ್ತು 10 ಅನ್ನು ಆವಾಗಲೇ ತೆಗೆಯಲಾಯಿತು ಎಂದರೆ ಸಾಕ್ಷಿ ಅವರು ಆರೋಪಿತರು ಎಂದು ನನಗೆ ಗೊತ್ತಿಲ್ಲ ಪೊಲೀಸರ ಕೋರಿಕೆಯ ಮೇರೆಗೆ ನಾನು ಸಹಿ ಮಾಡಿರುತ್ತೇನೆ ಎನ್ನುತ್ತಾರೆ. ನಿಮ್ಮ ಸಮಕ್ಷಮ ನಿಪಿ 12 ರಂತೆ ಪಂಚನಾಮೆ ಜರುಗಿಸಿದ್ದರೂ ಸಹ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯನುಡಿಯುತ್ತಿದ್ದೀರಿ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ** ಆರೋಪಿತರ ಪರ ವಕೀಲರು ಪಾಟೀ ಸವಾಲು ಇರುವುದಿಲ್ಲ ಎಂದು ತಿಳಿಸಿರುತ್ತಾರೆ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದ ಮೇಲೆ ಗಣಕೀಕರಿಸಿದೆ)

ಓ.ಹೇ.ಕೇ. ಸರಿ ಅದೆ.

ದಿವಾಣಿ ನ್ಯಾಯಾಧೀಶರು ಹಾಗೂ
ಪ್ರ.ದ.ನ್ಯಾ.ದಂ., ಹಳಿಯಾಳ.